

# ಚಾರಣಕ್ಕೆ ಕರಿಘಟ್ಟ

ಬೆಟ್ಟದ ಮೇಲಿನಿಂದ ಅಂಕು–ಡೊಂಕಾಗಿ ಹರಿಯುವ ಕಾವೇರಿ ನದಿ, ಅತ್ತ ಚಾಮುಂಡಿ ಬೆಟ್ಟ, ಇತ್ತ ಪಾಂಡವಪುರದ ಕುಂತಿ ಬೆಟ್ಟ, ಮೇಲುಕೋಟೆಯ ಬೆಟ್ಟ ಸಾಲು, ಗಂಜಾಂ, ಶ್ರೀರಂಗಪಟ್ಟಣ, ಮೈಸೂರು ನಗರಗಳು ಕಣ್ಣಳತೆಯ ದೂರಕ್ಕೂ ಕಾಣುತ್ತವೆ.

ಚಿತ್ರ–ಬರಹ: **ಗಣಂಗೂರು ನಂಜೇಗೌಡ**

**ಕಾ**ವೇರಿ– ಲೋಕಪಾವನಿ ನದಿಗಳ ಸಂಗಮ ಸ್ಥಾನದಲ್ಲಿರುವ ಕರಿಘಟ್ಟ ಪ್ರಕೃತಿ ತಾಣ ಚಾರಣಿಗರ ನೆಚ್ಚಿನ ತಾಣವಾಗಿದೆ. ಅರಣ್ಯ ಇಲಾಖೆ ಇಲ್ಲಿ ಬಗೆ ಬಗೆಯ ಗಿಡಗಳನ್ನು ನೆಟ್ಟು ಮತ್ತಷ್ಟು ಆಕರ್ಷಕಗೊಳಿಸುತ್ತಿದೆ. ಹೀಗಾಗಿ 'ಕಾಂಕ್ರೀಟ್ ಕಾಡಿ'ನಲ್ಲಿ ಕೆಲಸ ಮಾಡುವ ಜನರು ಹಸಿರು ಪರಿಸರದತ್ತ ಆಕರ್ಷಿತರಾಗುತ್ತಿದ್ದಾರೆ.

ಚಾರಣಕ್ಕೆ ಬರುವವರು ಶ್ರೀರಂಗಪಟ್ಟಣ– ಬನ್ನೂರು ರಸ್ತೆಯಿಂದ ಕರಿಘಟ್ಟದ ಮಧ್ಯ ಭಾಗದಲ್ಲಿರುವ ಶ್ರೀನಿವಾಸ ದೇಗುಲದ ವರೆಗೆ 450 ಕಲ್ಲು ಚಪ್ಪಡಿಯ ಮೆಟ್ಟಿಲುಗಳನ್ನು ಹತ್ತಿ ಸುಲಭವಾಗಿ ದೇವಾಲಯ ತಲುಪಬಹುದು. ದಣಿವಾದರೆ ಮೆಟ್ಟಿಲುಗಳ ಇಕ್ಕೆಲಗಳಲ್ಲಿರುವ ಅರವಟ್ಟಿಗೆಗಳಲ್ಲಿ ಕುಳಿತು ವಿಶ್ರಮಿಸಬಹುದು.

ಕುದುರೆ ಲಾಯ ಎನ್ನಲಾದ ತುತ್ತ ತುದಿ ತಲುಪಬೇಕಾದರೆ ಮಣ್ಣಿನ ರಸ್ತೆಯಲ್ಲೇ ನಡೆಯಬೇಕು. ಈ ಪ್ರದೇಶ ತೀರಾ ಕಡಿದಾಗಿರುವುದರಿಂದ ವಯಸ್ಸಾದವರು ಚಾರಣ ಮಾಡುವುದು ಕಷ್ಟ.

ಕರಿಘಟ್ಟದ ಕೋಡುಗಲ್ಲು ಇರುವ ತುದಿ ತಲುಪಿದರೆ ತಂಗಾಳಿ ತೀಡುವುದರಿಂದ ಮೈ, ಮನಗಳಿಗೆ ಹಾಯ್ ಎನಿಸುತ್ತದೆ. ಘಟ್ಟದ ಸುತ್ತಲೂ ಕಾಣುವ ಹಸಿರು ಸಿರಿಯನ್ನು ಕಣ್ತುಂಬಿಕೊಳ್ಳಬಹುದು. ಕಾವೇರಿ ನದಿ, ಚಾಮುಂಡಿ ಬೆಟ್ಟ, ಪಾಂಡವಪುರದ ಕುಂತಿ ಬೆಟ್ಟ, ಮತ್ತಷ್ಟು ದೂರದಲ್ಲಿ ಮೇಲುಕೋಟೆಯ ಬೆಟ್ಟ ಸಾಲು, ಗಂಜಾಂ, ಶ್ರೀರಂಗಪಟ್ಟಣ, ಮೈಸೂರು ನಗರಗಳು ಕಣ್ಣಳತೆಯಲ್ಲೇ ಇರುವಂತೆ ಕಾಣುತ್ತವೆ.

ಶ್ರೀನಿವಾಸ ದೇಗುಲ: ಕರಿಘಟ್ಟದ ಮಧ್ಯ ಭಾಗದಲ್ಲಿರುವ ಶ್ರೀನಿವಾಸ (ವೆಂಕಟರಮಣಸ್ವಾಮಿ)ದೇಗುಲ ಚೋಳರ ಕಾಲದಲ್ಲಿ ನಿರ್ಮಾಣವಾಗಿದೆ ಎಂದು ಹೇಳಲಾಗುತ್ತದೆ. ನಂತರದ ವರ್ಷಗಳಲ್ಲಿ ಶ್ರೀರಂಗಪಟ್ಟಣವನ್ನು ರಾಜಧಾನಿ ಮಾಡಿಕೊಂಡು ಮೈಸೂರು ರಾಜ್ಯವನ್ನಾಳಿದ ಒಡೆಯರ್ ದೊರೆಗಳು ಈ ದೇಗುಲವನ್ನು ಕಾಲ ಕಾಲಕ್ಕೆ ಜೀರ್ಣೋದ್ಧಾರ ಮಾಡಿದ್ದಾರೆ.